## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಎಸ್.ಎಲ್ ಭೋಜೇಗೌಡ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1149
ಉತ್ತರಿಸಬೇಕಾದ ದಿನಾಂಕ : 17.03.2020

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೈತರಿಗಾಗಿ ಇರುವ ವಿವಿಧ ಸಾಲ ಯೋಜನೆಗಳು ಯಾವುವು: (ಈ ಸಾಲ ಯೋಜನೆಯ ನಿಯಮಗಳ ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ರೈತರಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಮತ್ತು ಪಿಕಾರ್ಡ್ ಬ್ಯಾಂಕುಗಳ ಮೂಲಕ ಸರ್ಕಾರದಿಂದ ಬಡ್ಡಿ ಸಹಾಯಧನ ನೀಡುವ ಮೂಲಕ ರೈತರಿಗೆ ಇರುವ ಯೋಜನೆಗಳು ಈ ಕೆಳಗಿನಂತಿವೆ.<br><br>1. <u>**ಶೂನ್ಯ ಬಡ್ಡಿ ದರದಲ್ಲಿ ಬೆಳೆ ಸಾಲ ನೀಡುವ ಯೋಜನೆ**</u> – ರೂ.3 ಲಕ್ಷಗಳ ವರೆಗಿನ ಬೆಳೆ ಸಾಲವನ್ನು ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ನೀಡುವ ಯೋಜನೆ ಇರುತ್ತದೆ.<br>2. <u>**ಶೇ. 3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡುವ ಯೋಜನೆ**</u> – ರೂ.10 ಲಕ್ಷಗಳ ವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲವನ್ನು ಶೇ..3 ರ ಬಡ್ಡಿ ದರ ಅನ್ವಯವಾಗುವಂತೆ ರೈತರಿಗೆ ನೀಡುವ ಯೋಜನೆ ಇರುತ್ತದೆ.<br>3. <u>**ಗೃಹ ಲಕ್ಷ್ಮಿ ಯೋಜನೆ**</u> – ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಬಂಗಾರವನ್ನು ಅಡವಿಟ್ಟುಕೊಂಡು ರೂ.2.00 ಲಕ್ಷಗಳ ವರೆಗಿನ ಬೆಳೆ ಸಾಲವನ್ನು ಶೇ.3 ರ ಬಡ್ಡಿ ದರದಲ್ಲಿ ವಿತರಿಸುವ ಯೋಜನೆ ಇರುತ್ತದೆ.<br><br>ಸಹಕಾರ ಬ್ಯಾಂಕುಗಳು ಸರ್ಕಾರದ ಸಹಾಯಧನ ಇಲ್ಲದೇ ಈ ಕೆಳಕಂಡ ಸಾಮಾನ್ಯ ಕೃಷಿಯೇತರ ಸಾಲಗಳನ್ನು ವಿತರಿಸುತ್ತಿವೆ. ಈ ಯೋಜನೆಗಳಿಗೆ ಬ್ಯಾಂಕುಗಳು ತಮ್ಮ ಹಂತದಲ್ಲಿ ಸಾಲದ ನಿಯಮಾವಳಿಗಳನ್ನು ರೂಪಿಸಿಕೊಂಡಿದ್ದು, ಸರ್ಕಾರದಿಂದ ಷರತ್ತುಗಳು ಇರುವುದಿಲ್ಲ.<br><br>1. ವಾಹನ ಸಾಲ<br>2. ಗೃಹ ನಿರ್ಮಾಣ ಸಾಲ<br>3. ಬಂಗಾರದ ಸಾಲ<br>4. ಕೃಷಿ ಉತ್ಪನ್ನಗಳನ್ನು ಅಡವಿಟ್ಟುಕೊಂಡು ಅಡಮಾನ ಸಾಲ ಇನ್ನೂ ಮುಂತಾದವು |
| ಆ) | ಈ ಯೋಜನೆಗಳಲ್ಲಿ ಸಹಾಯಧನ (ಸಬ್ಸಿಡಿ) ಹೊಂದಿರುವ ಯೋಜನೆಗಳು ಯಾವುವು: (ಈ ಯೋಜನೆಗಳ ರೂಪುರೇಷೆಗಳ ಮಾಹಿತಿ ನೀಡುವುದು) | ಸಹಾಯಧನ (ಸಬ್ಸಿಡಿ) ಹೊಂದಿರುವ ಯೋಜನೆಗಳು ಈ ಕೆಳಗಿನಂತಿರುತ್ತವೆ.<br>1. <u>**ಶೂನ್ಯ ಬಡ್ಡಿ ದರದಲ್ಲಿ ಬೆಳೆ ಸಾಲ ನೀಡುವ ಯೋಜನೆ**</u> – ರೂ.3 ಲಕ್ಷಗಳ ವರೆಗಿನ ಬೆಳೆ ಸಾಲವನ್ನು ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ವಿತರಿಸಲಾಗುತ್ತಿದೆ.<br>ರೈತರು ಸಹಕಾರ ಸಂಘದಲ್ಲಿ ಸದಸ್ಯತ್ವ ಪಡೆದು ಭೂಮಿ ಹೊಂದಿರಬೇಕು. ನಿಗದಿತ ಅರ್ಜಿ ನಮೂನೆಯಲ್ಲಿ ರೈತನು ಬೆಳೆಯುವ ಬೆಳೆಯ ವಿವರವನ್ನು ಸಲ್ಲಿಸಬೇಕು. ಮರುಪಾವತಿಗೆ ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಅಸಲನ್ನು ಮರುಪಾವತಿಸಬೇಕು.<br>2. <u>**ಶೇ. 3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡುವ ಯೋಜನೆ**</u> – ರೂ.10 ಲಕ್ಷಗಳ ವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲವನ್ನು ಶೇ..3 ರ ಬಡ್ಡಿ ದರ ಅನ್ವಯವಾಗುವಂತೆ ರೈತರಿಗೆ ನೀಡುವ ಯೋಜನೆ ಇರುತ್ತದೆ. |

| | | |
|---|---|---|
| | | ಈ ಯೋಜನೆಯಲ್ಲಿ ರೈತನು ಟ್ರಾಕ್ಟರ್, ಪವರ್ ಟಿಲ್ಲರ್ ಮುಂತಾದ ಕೃಷಿಯಂತ್ರೋಪಕರಣಗಳನ್ನು ಒಳಗೊಂಡಂತೆ ನಬಾರ್ಡ್ ಗುರುತಿಸಿದ ಕೃಷಿ ಮತ್ತು ಪೂರಕ ಉದ್ದೇಶಗಳಿಗೆ ಸಾಲ ನೀಡಲಾಗುತ್ತಿದೆ.<br><br>ರೈತರು ಸಹಕಾರ ಸಂಘದಲ್ಲಿ ಸದಸ್ಯತ್ವ ಪಡೆದು ಭೂಮಿ ಹೊಂದಿರಬಬೇಕು. ನಿಗದಿತ ಅರ್ಜಿ ನಮೂನೆಯೊಂದಿಗೆ ಯೋಜನಾ ವರದಿ, ಕೋಟೇಷನ್ ಗಳು, ವಿವಿಧ ಇಲಾಖೆಯ ಅನುಮತಿ ಪತ್ರ ಮುಂತಾದ ದಾಖಲೆಗಳೊಂದಿಗೆ ಸಹಕಾರ ಸಂಘಗಳಿಗೆ ಅರ್ಜಿ ಸಲ್ಲಿಸಬೇಕು. ಮರುಪಾವತಿಗೆ ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಅಸಲು ಮತ್ತು ಶೇ.3 ರ ಬಡ್ಡಿಯನ್ನು ಮರುಪಾವತಿಸಬೇಕು.<br><br>3. **ಗೃಹ ಲಕ್ಷ್ಮಿ ಯೋಜನೆ** – ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಬಂಗಾರವನ್ನು ಅಡವಿಟ್ಟುಕೊಂಡು ರೂ.2.00 ಲಕ್ಷಗಳ ವರೆಗಿನ ಬೆಳೆ ಸಾಲವನ್ನು ಶೇ.3 ರ ಬಡ್ಡಿ ದರದಲ್ಲಿ ವಿತರಿಸುವ ಯೋಜನೆ ಇರುತ್ತದೆ.<br><br>ರೈತರು ಸಹಕಾರ ಸಂಘದಲ್ಲಿ ಸದಸ್ಯತ್ವ ಪಡೆದು ಭೂಮಿ ಹೊಂದಿರಬೇಕು. ನಿಗದಿತ ಅರ್ಜಿ ನಮೂನೆಯಲ್ಲಿ ರೈತನು ಬೆಳೆಯುವ ಬೆಳೆ ಯ ವಿವರವನ್ನು ಸಲ್ಲಿಸಬೇಕು. ಮರುಪಾವತಿಗೆ ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಅಸಲು ಮತ್ತು ಶೇ.3 ರ ಬಡ್ಡಿಯನ್ನು ಮರುಪಾವತಿಸಬೇಕು. |
| ಇ) | ಈ ಸಾಲ ಯೋಜನೆಯ ಲಾಭ ಪಡೆಯಲು ರೈತರು ಅನುಸರಿಸಬೇಕಾಗಿರುವ ನಿಯಮಗಳೇನು: (ಸಂಪೂರ್ಣ ಮಾಹಿತಿ ನೀಡುವುದು) | ಬೆಳೆ ಸಾಲ ಪಡೆಯಲು ರೈತರು ಸಹಕಾರ ಸಂಘದಲ್ಲಿ ಸದಸ್ಯತ್ವ ಪಡೆದು ಭೂಮಿ ಹೊಂದಿರಬೇಕು. ನಿಗದಿತ ಅರ್ಜಿ ನಮೂನೆಯಲ್ಲಿ ರೈತನು ಬೆಳೆಯುವ ಬೆಳೆ ಯ ವಿವರವನ್ನು ಸಲ್ಲಿಸಬೇಕು. |
| ಈ) | ರೈತರಿಗಾಗಿ ವಾಹನ ಸಾಲ ಯೋಜನೆ ಜಾರಿಯಲ್ಲಿದೆಯೇ: | ರೈತರಿಗಾಗಿ ವಾಹನ ಸಾಲಗಳನ್ನು ಸರ್ಕಾರದ ಬಡ್ಡಿ ಸಹಾಯಧನ ನೀಡದೇ ಸಾಮಾನ್ಯ ಬಡ್ಡಿ ದರದಲ್ಲಿ ಪಿಕಾರ್ಡ್ ಬ್ಯಾಂಕುಗಳಿಂದ ಮತ್ತು ಡಿಸಿಸಿ ಬ್ಯಾಂಕುಗಳಿಂದ ನೀಡಲಾಗುತ್ತಿದೆ. |
| ಉ) | ಇದ್ದಲ್ಲಿ, ಯಾವ ಯಾವ ವಾಹನಗಳಿಗೆ ಸಾಲ ನೀಡಲಾಗುತ್ತಿದೆ: ವಾಹನ ಸಾಲ ಯೋಜನೆಯಲ್ಲಿ ಸಬ್ಸಿಡಿ ನೀಡಲಾಗುತ್ತಿದೆ? | ನಬಾರ್ಡ್ ನಿಯಮಾವಳಿಗಳನ್ವಯ ದ್ವಿಚಕ್ರ ವಾಹನ ಮತ್ತು ಪಿಕ್‌ಅಪ್ ವಾಹನಗಳಿಗೆ ಸಾಲ ನೀಡಲಾಗುತ್ತಿದೆ. ಆದರೆ ಈ ಸಾಲಗಳಿಗೆ ಸರ್ಕಾರದಿಂದ ಸಹಾಯಧನ ನೀಡಲಾಗುವುದಿಲ್ಲ. |

**ಸಂಖ್ಯೆ : ಸಿಒ 132 ಸಿಎಲ್‌ಎಸ್ 2020**

(ಎಸ್.ಟಿ ಸೋಮಶೇಖರ್)

ಸಹಕಾರ ಸಚಿವರು